# ಪಿ.ವಿ. ನಾರಾಯಣ

## ಪಾಂಡಿತ್ಯ, ಪ್ರತಿಭೆ, ವಿದ್ವತ್ತು, ವಿನಯಗಳ ಅಪೂರ್ವ ಸಮೀಕರಣ



**ಆರ್. ಲಕ್ಷ್ಮೀನಾರಾಯಣ**

'ಪಾಂಡಿತ್ಯ, ಪ್ರತಿಭೆ, ವಿದ್ವತ್ತು ವಿನಯಗಳ ನಾರಾಯಣ' ಎಂದು ತಮ್ಮ ಹೆಸರಿನ ಆದ್ಯಕ್ಷರಗಳಿಗೆ ಅನ್ವರ್ಥವಾಗಿ ಜೀವಿಸಿದವರು ಪಿ.ವಿ. ನಾರಾಯಣ. ಕನ್ನಡ ವಿದ್ವತ್ತು ಮತ್ತು ವಿಮರ್ಶೆಯ ಕ್ಷೇತ್ರದಲ್ಲಿ ಸಾರ್ಥಕವಾದ ಕೃಷಿ ಮಾಡುತ್ತಲೇ, ಕನ್ನಡದ ಸ್ಥಾನಮಾನಗಳಿಗೆ ಸಂಬಂಧಿಸಿದ ಹೋರಾಟಗಳಲ್ಲೂ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಅಪೂರ್ವ ವ್ಯಕ್ತಿ ಅವರು. ವಿದ್ವಾಂಸರಾಗಿ, ಅಧ್ಯಾಪಕರಾಗಿ, ವಾಗ್ಮಿಯಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಕಾದಂಬರಿಕಾರರಾಗಿ ಕನ್ನಡವನ್ನು ಕಟ್ಟುವ ಕಾಯಕದಲ್ಲಿ ಸುಮಾರು ಅರ್ಧ ಶತಮಾನಕ್ಕಿಂತ ಹೆಚ್ಚಿನ ಕಾಲ ತೊಡಗಿಸಿಕೊಂಡಿದ್ದ ಅವರು ಸುಮಾರು ಎಂಬತ್ತು ಕೃತಿಗಳನ್ನು ರಚಿಸಿದ್ದಾರೆ.

ದೂರದಿಂದ ನೋಡಿದಾಗ ಶ್ರೀಮದ್ಗಾಂಭೀರ್ಯದ ವ್ಯಕ್ತಿಯಂತೆ ಕಾಣುತ್ತಿದ್ದ ಪಿ.ವಿ. ನಾರಾಯಣ, ತಮ್ಮ ಪಾಂಡಿತ್ಯ, ವಿದ್ವತ್ತುಗಳನ್ನು ಕಿಂಚಿತ್ತೂ ತೋರಿಸಿಕೊಳ್ಳದೆ – ಹಿರಿಯರು, ಕಿರಿಯರು, ಸಮವಯಸ್ಸಿನ ಮಿತ್ರರು, ವಿದ್ವಾಂಸರು, ಜನಸಾಮಾನ್ಯರು, ಎಲ್ಲರೊಂದಿಗೆ ನಗುನಗುತ್ತಾ, ಹಾಸ್ಯಚಟಾಕಿಗಳನ್ನು ಹಾರಿಸುತ್ತಲೇ ಕೆಲಸ ಮಾಡುತ್ತಿದ್ದ ಸ್ನೇಹಜೀವಿ.

ಡಿಸೆಂಬರ್ 18, 1942ರಂದು ಜನಿಸಿದ ಪಿ.ವಿ. ನಾರಾಯಣ (ಪ್ರಧಾನ್ ವೆಂಕಪ್ಪಯ್ಯ ನಾರಾಯಣ), ಮೂಲತಃ ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಅಕ್ಕಿರಾಂಪುರದ ಕೆಳ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು. ಪಿವಿಎನ್ ಅವರ ಪ್ರಾಥಮಿಕ ವಿದ್ಯಾಭ್ಯಾಸ ಬೆಂಗಳೂರಿನಲ್ಲಿ ಆರಂಭವಾಗಿ, ಮುಂದೆ ಮಾಧ್ಯಮಿಕ ಶಾಲೆಯವರೆಗೆ ಅಜ್ಜನ ಊರಾದ ಪಾವಗಡ ತಾಲ್ಲೂಕಿನ ಕೊಂಡೇತಿಮ್ಮನ ಹಳ್ಳಿಯಲ್ಲಿ ನಡೆಯಿತು. ಪ್ರೌಢಶಾಲೆ ಮತ್ತು ಇಂಟರ್‌ಮೀಡಿಯೇಟ್ ಅನ್ನು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಮುಗಿಸಿ, ಪದವಿ ವ್ಯಾಸಂಗಕ್ಕೆ ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸೇರಿದರು. ಅಲ್ಲಿ ಸಿ. ಮಹಾದೇವಪ್ಪ, ಜಿ.ಎಸ್. ಸಿದ್ಧಲಿಂಗಯ್ಯ, ಸಾ.ಶಿ. ಮರುಳಯ್ಯ, ಎಚ್.ಜಿ. ಸಣ್ಣಗುಡ್ಡಯ್ಯ ಮುಂತಾದ ನುರಿತ ಕನ್ನಡ ಪ್ರಾಧ್ಯಾಪಕರ ವಿದ್ಯಾರ್ಥಿಯಾಗಿ, ಬಿ.ಎ ಮುಗಿಸಿದರು. ಮಾನಸ ಗಂಗೋತ್ರಿಯಲ್ಲಿ (1962–64) ಎಸ್.ವಿ.ಪಿ., ದೇಜಗೌ, ಹಾಮಾನಾ, ಎಲ್. ಬಸವರಾಜು ಮುಂತಾದ ವಿದ್ವಾಂಸರ ಗರಡಿಯಲ್ಲಿ